# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ – 583104

ಕುಲಸಚಿವರು(ಮೌಲ್ಯಮಾಪನ) ದೂರವಾಣಿ: 08392-241011


ಸಂಖ್ಯೆ: ವಿಶ್ರೀಕೃವಿಬ/ಸ್ನಾತಕ/ಪರೀಕ್ಷಾ/2022-23/885 ದಿನಾಂಕ: 02.08.2022

## ಅಧಿಸೂಚನೆ

ವಿಷಯ: ಆಗಸ್ಟ್/ಸೆಪ್ಟಂಬರ್-2022ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 2ನೇ ಸೆಮಿಸ್ಟರ್ (Repeaters), 4ನೇ, 6ನೇ ಸೆಮಿಸ್ಟರ್ (Regular/Repeaters) ಮತ್ತು 5ನೇ ಸೆಮಿಸ್ಟರ್ (Repeaters) ಲಿಖಿತ/ಪ್ರಾಯೋಗಿಕ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30.07.2022

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ವಿಶ್ವವಿದ್ಯಾಲಯದ ಶೈಕ್ಷಣಿಕ ವೇಳಾಪಟ್ಟಿಯನ್ವಯ ಆಗಸ್ಟ್/ಸೆಪ್ಟಂಬರ್-2022ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 2ನೇ ಸೆಮಿಸ್ಟರ್ (Repeaters), 4ನೇ, 6ನೇ ಸೆಮಿಸ್ಟರ್ (Regular/Repeaters) ಮತ್ತು 5ನೇ ಸೆಮಿಸ್ಟರ್ (Repeaters) ವಿದ್ಯಾರ್ಥಿಗಳ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ, ಶುಲ್ಕ ಪಾವತಿಸುವ ದಿನಾಂಕಗಳು ಈ ಕೆಳಗಿನಂತಿವೆ.

### ಅರ್ಜಿ (ಶುಲ್ಕ ಪಾವತಿಸಲು) ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು

| ಕ್ರ.ಸಂ | ವಿವರ | ದಿನಾಂಕಗಳು |
|---|---|---|
| 01 | ದಂಡ ಶುಲ್ಕ ರಹಿತ | 03-08-2022 ರಿಂದ 09-08-2022 ವರೆಗೆ |
| 02 | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 200/- ರಂತೆ | 10-08-2022 ರಿಂದ 13-08-2022 ವರೆಗೆ |
| 03 | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 500/- ರಂತೆ | 14-08-2022 ರಿಂದ 15-08-2022 ವರೆಗೆ |

### ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಶುಲ್ಕದ ವಿವರ

| ಕ್ರ.ಸಂ | ವಿವರಣೆ | ಬಿ.ಎ/ಬಿ.ಕಾಂ/ ಬಿ.ಕಾಂ ವೆಕೇಷನಲ್/ ಬಿ.ಎಸ್.ಡಬ್ಲ್ಯೂ | ಬಿ.ಎಸ್ಸಿ/ಬಿ.ಎಸ್ಸಿ ಬಯೋಟೆಕ್ನಾಲಜಿ/ ಗಾರ್ಮೆಂಟ್ಸ್/ ಬಿಎಎಸ್‌ಎಲ್‌ಪಿ | ಬಿಬಿಎ/ಬಿಬಿಎಂ/ ಬಿಸಿಎ/ಬಿಹೆಚ್‌ಎಂ /ಎಂಬಿಎ (ಇಂಟಿಗ್ರೇಟೆಡ್) | ಬಿ.ಪಿ.ಇಡಿ | ಸ್ನಾತಕ ಡಿಪ್ಲೋಮಾ |
|---|---|---|---|---|---|---|
| 01. | ಪ್ರತಿ ಸೆಮಿಸ್ಟರ್ ಪರೀಕ್ಷೆಗಳಿಗೆ | ರೂ. 1100/- | ರೂ. 1250/- | ರೂ. 1300/- | ರೂ. 1560/- | ರೂ. 1320/- |
| 02. | ಒಂದು ಪತ್ರಿಕೆಗೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ) | ರೂ. 290-/ | ರೂ. 290-/ | ರೂ. 290-/ | ರೂ. 290-/ | ರೂ. 290-/ |
| 03. | ಎರಡು ಪತ್ರಿಕೆಗಳಿಗೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ) | ರೂ. 440/- | ರೂ. 440/- | ರೂ. 440/- | ರೂ. 440/- | ರೂ. 440/- |
| 04. | ಎರಡಕ್ಕಿಂತ ಹೆಚ್ಚು ಪತ್ರಿಕೆಗಳಿಗೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ) | ರೂ. 1100/- | ರೂ. 1250/- | ರೂ. 1300/- | ರೂ. 1560/- | ರೂ. 1320/- |
| 05 | ಪ್ರಾಯೋಗಿಕ ಪರೀಕ್ಷೆಯ ಪ್ರತಿ ಪತ್ರಿಕೆಗೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ) | ರೂ. 150/- | ರೂ. 150/- | ರೂ. 150/- | ರೂ. 150/- | ರೂ. 150/- |
| 06 | ಅಂಕಪಟ್ಟಿ ಶುಲ್ಕ ಪ್ರತಿ ಸೆಮಿಸ್ಟರ್‌ಗೆ | ರೂ. 200/- | ರೂ. 200/- | ರೂ. 200/- | ರೂ. 200/- | ರೂ. 200/- |
| 07 | ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ (ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ) | ರೂ. 200/- | ರೂ. 200/- | ರೂ. 200/- | ರೂ. 200/- | ರೂ. 200/- |

ಈ ಪರೀಕ್ಷೆಗಳಿಗೆ ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳು ಅರ್ಜಿಯನ್ನು ಭರಿಸಲು Online ಮೂಲಕ ಮಾತ್ರ ಅವಕಾಶವಿರುತ್ತದೆ. ವಿಶ್ವವಿದ್ಯಾಲಯವು ನೇರವಾಗಿ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ.

## :ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿಗಳಿಗೆ ಸೂಚನೆ:

1. ವಿದ್ಯಾರ್ಥಿಗಳು ಆನ್‌ಲೈನ್ (**Online**) ಮುಖಾಂತರ ಅರ್ಜಿ ಸಲ್ಲಿಸಲು www.vskub.ac.in (**EXAMINATION >>>> Online Examination Application Form** ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ, ಶುಲ್ಕದ ವಿವರಗಳುಳ್ಳ ಅರ್ಜಿ ಭರಿಸಿ, ಶುಲ್ಕ ಸಂದಾಯಿಸಿದ ನಂತರ ಪ್ರತಿಯನ್ನು ತಕ್ಷಣ ವಿದ್ಯಾರ್ಥಿಗಳು ಮಹಾವಿದ್ಯಾಲಯಗಳಲ್ಲಿ ಸಲ್ಲಿಸಬೇಕು.
2. SC/ST ಹಾಗೂ OBC ಅಭ್ಯರ್ಥಿಗಳು (ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ಅಭ್ಯರ್ಥಿಗಳು) ಪ್ರವರ್ಗ-1, 2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳು ವಿನಾಯಿತಿ ಶುಲ್ಕವನ್ನು ಹಾಗೂ ಇತರೆ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಈ ಬಗ್ಗೆ ಎಲ್ಲಾ ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು SC/ST ಹಾಗೂ OBC ವಿದ್ಯಾರ್ಥಿಗಳ ಆದಾಯ ವಿನಾಯಿತಿಯನ್ನು ಪರಿಗಣಿಸುವ ಮುನ್ನ ಆದಾಯ ಮಿತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸೂಕ್ತವಾಗಿ ಪರಿಶೀಲಿಸಿ ಆದಾಯ ಮಿತಿಗೆ ಒಳಪಡುವ ವಿದ್ಯಾರ್ಥಿಗಳ ಮಾಹಿತಿಯನ್ನು ಜಾಲತಾಣದಲ್ಲಿ ಧೃಡೀಕರಿಸಲು ತಿಳಿಸಲಾಗಿದೆ.
3. ಮಹಾವಿದ್ಯಾಲಯಗಳಿಂದ ಧೃಡೀಕರಣ ಮತ್ತು ಅನುಮೋದನೆ ಪಡೆದಿರುವ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಪರವಾನಿಗೆ ಇರುತ್ತದೆ.
4. SC/ST ಹಾಗೂ OBC ಅಭ್ಯರ್ಥಿಗಳು (ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ಅಭ್ಯರ್ಥಿಗಳು) ರೆಗ್ಯೂಲರ್ (Fresher) ವಿದ್ಯಾರ್ಥಿಗಳು ಅಂಕಪಟ್ಟಿ ಶುಲ್ಕ ರೂ. 200/-ನ್ನು ಮಾತ್ರ ಪಾವತಿಸಬೇಕು. ಆದರೆ ಸದರಿ ವರ್ಗದ ಪುನರಾವರ್ತಿತ (Repeater) ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ. ಅವರುಗಳು ಪೂರ್ಣ ಶುಲ್ಕ ಭರಿಸಬೇಕು.
5. ಸರ್ಕಾರ ನಿಗದಿಪಡಿಸಿದ ಆದಾಯದ ಮಿತಿಯೊಳಗಿರುವ SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾತಿ ಪಡೆದ ನಂತರ ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.
6. ಸರ್ಕಾರ ನಿಗದಿಪಡಿಸಿದ ಆದಾಯದ ಮಿತಿಯೊಳಗಿರುವ ಶುಲ್ಕ ವಿನಾಯಿತಿ ಪಡೆದಿರುವ SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳ ವ್ಯತ್ಯಾಸ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾತಿ ಪಡೆದ ನಂತರ ಆಯಾ ಮಹಾವಿದ್ಯಾಲಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಶುಲ್ಕ ವಿನಾಯಿತಿ ಮೊತ್ತವನ್ನು ಪಾವತಿಸುವಲ್ಲಿ ತಪ್ಪಿದ್ದಲ್ಲಿ ವಿಶ್ವವಿದ್ಯಾಲಯವು ಕೈಗೊಳ್ಳುವ ಕ್ರಮಕ್ಕೆ ಬದ್ಧರಾಗಿರತಕ್ಕದ್ದು.
7. ಪರೀಕ್ಷೆ ತೆಗೆದುಕೊಳ್ಳುವ ಪುನರಾವರ್ತಿತ (Repeaters) ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸತಕ್ಕದ್ದು.
8. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ತನ್ನ ನೊಂದಣಿ ಸಂಖ್ಯೆಯನ್ನು ಬಿಟ್ಟು ಬೇರೆ ನೊಂದಣಿ ಸಂಖ್ಯೆ ಅಥವಾ ಬೇರೆ ವಿಷಯಗಳನ್ನು ನಮೂದಿಸಿದರೆ ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.
9. ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ. ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
10. ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಂಶುಪಾಲರುಗಳು ಧೃಢೀಕರಿಸಿ ಪ್ರತ್ಯೇಕವಾಗಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸತಕ್ಕದ್ದು. ಈ ವಿವರ ಸಲ್ಲಿಸಿದ ಮಹಾವಿದ್ಯಾಲಯಗಳ ಪರೀಕ್ಷಾರ್ಥಿಗಳಿಗೆ ಮಾತ್ರ ಪ್ರವೇಶ ಪತ್ರ ನೀಡಲಾಗುವುದು. ಈ ಕಾರಣದಿಂದ ಯಾವುದೇ ಮಹಾವಿದ್ಯಾಲಯಗಳಿಗೆ/ವಿದ್ಯಾರ್ಥಿಗಳಿಗೆ ತೊಂದರೆ ಆದಲ್ಲಿ ಸಂಬಂಧಪಟ್ಟ ಪ್ರಾಚಾರ್ಯರುಗಳೇ ಜವಾಬ್ದಾರಿಯಾಗಿರುತ್ತಾರೆ.

ಕುಲಸಚಿವರು(ಮೌಲ್ಯಮಾಪನ)
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಗೆ,
**ಸಂಬಂಧಿಸಿದ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
2. ಕುಲಸಚಿವರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
4. ಮೇ// ಲಾಜಿಸಿಸ್, ಬೆಂಗಳೂರು, ಶಾಖೆ ವಿಶ್ರೀಕೃ ವಿಶ್ವವಿದ್ಯಾಲಯ ಆವರಣ, ಬಳ್ಳಾರಿ.
5. ಕಛೇರಿ ಪ್ರತಿ.